
# ಕಾನನ

ನಿಸರ್ಗದೆಡೆಗೆ ಪಯಣ

ನವೆಂಬರ್ 2015



WILDLIFE
CONSERVATION
GROUP

# ಕಾನನ

## ನಿಸರ್ಗದೆಡೆಗೆ ಪಯಣ



© Karthik .A.K

ನವೆಂಬರ್ 2015

BANNERUGHATTA

WILDLIFE
CONSERVATION
GROUP

* ಗುಬ್ಬಿ
* ಏಡಿ ಜೇಡ
* ಕಾಣೆಯಾಗುತ್ತಿರುವ ಕಾಡುಮಾವು
* ಶಿಖರ
* ಪ್ರಕೃತಿ ಬಿಂಬ




**ಲೇಖಕ ವೃಂದ**

ಮಧುಸೂದನ .ಹೆಚ್ .ಸಿ

ವಿಪಿನ್ ಬಳಿಗ

ಆರ್. ಎಸ್. ರವೀಂದ್ರ

ಕೃಷ್ಣನಾಯಕ್

ಕಾರ್ತಿಕ್ .ಎ .ಕೆ

**ವಿನ್ಯಾಸ**

ಅಶ್ವಥ .ಕೆ.ಎನ್

**ಛಾಯಾಚಿತ್ರಗಳು**

ಕಾರ್ತಿಕ್ .ಎ .ಕೆ

ವಿಪಿನ್ ಬಳಿಗ

**ಪರಿಷ್ಕರಣೆ**

ಮುರಳಿ .ಎಸ್

ನಾಗೇಶ್ .ಓ .ಎಸ್



# ಗುಬ್ಬಿ

“ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರಿಯಸಿ" ನಿರಂತರವಾಗಿ ನನ್ನ ಕಾಡುವ ವಾಕ್ಯವಿದು. ತಾಯಿ ಮತ್ತು ಹುಟ್ಟಿದ ಭೂಮಿಯು ನಮಗೆ ಸ್ವರ್ಗಕ್ಕಿಂತಲೂ ಮಿಗಿಲು ಎಂಬ ಅರ್ಥವನ್ನು ನೀಡುತ್ತದೆ. ಪ್ರೌಢಶಾಲೆಯಲ್ಲಿ ಓದುವಾಗ ಸಂಸ್ಕೃತ ಪಾಠದಲ್ಲಿ ಕಲಿತ ಸಾಲು. ತಾಯ್ನೆಲವಾದ ಈ ಭೂಮಿಯು ಸೃಷ್ಟಿಯ ಸಕಲ ಜೀವ ಸಂಕುಲಗಳಿಗೆ, ಹೆತ್ತ ತಾಯಿಯು ತನ್ನ ಮಕ್ಕಳಿಗೆ ನೀಡುವ ಕೊಡುಗೆ ಅಪಾರ. ನಿಸ್ವಾರ್ಥಿಗಳಾದ ಈ ಎರಡೂ ಅನರ್ಘ್ಯ ರತ್ನಗಳು ಪ್ರತಿಯಾಗಿ ಏನನ್ನೂ ಅಪೇಕ್ಷಿಸಲಾರವು. ಇಂತಹ ಸಹನದೇವತೆಗಳಿಗೆ ಏನನ್ನಾದರೂ ಒಂದು ಸಣ್ಣ ಕೊಡುಗೆ ನೀಡಬೇಕೆಂಬ ಹಂಬಲ ಮತ್ತು ಪ್ರಯತ್ನ ಅಷ್ಟೆ, “ಅಳಿಲು ಸೇವೆ ಅಂತರಲ್ಲಾ ಹಾಗೆ".

ಅಂದು ಮಹಾನವಮಿಯ ಹಬ್ಬದ ದಿನ. ಮುಂಜಾನೆ ಸೂರ್ಯ ಮೂಡುವ ಮುಂಚೆಯೆ ಎದ್ದು ಮನೆಯ ಮುಂದೆ ಸಗಣಿಯಿಂದ ಬಳಿದು ರಂಗೋಲಿ ಹಾಕಿ, ಹೊಸಲಿಗೆ ಅರಿಸಿನ ಕುಂಕುಮದಿಂದ ಸಿಂಗರಿಸಿ, ಹೂ ಮೇಲಿಟ್ಟು ಪೂಜೆ ಸಲ್ಲಿಸಿದ ನಂತರವೇ ಮುಂದಿನ ಕಾರ್ಯ. ಸಾಮಾನ್ಯವಾಗಿ ಎಲ್ಲಾ ಹಳ್ಳಿಗಳಲ್ಲಿ ಹಬ್ಬದ ದಿನದಂದು ಮೂಡುವ ಚಿತ್ರಣ. ಇದಕ್ಕೆ ನನ್ನ ಹಳ್ಳಿಯೂ ಹೊರತಲ್ಲ. ಬೆಂಗಳೂರಲ್ಲಿ ಬೆಳಗ್ಗೆ ಒಂಬತ್ತು ಗಂಟೆಯಾಗಿ ಸೂರ್ಯ ನೆತ್ತಿ ಮೇಲೆ ಬಂದರೂ ಕಾಲು ಚಾಚಿ ಮಲಗುವ ನನ್ನಂತಹ ಸೋಮಾರಿಗಳಿಗೂ ಎಚ್ಚರಿಸುವ ಹಾಗೂ ಚೈತನ್ಯ ತುಂಬುವ ನನ್ನ ಹಳ್ಳಿ ನಿಜಕ್ಕೂ ಅದ್ಭುತ. ಸುಮಾರು 60 ಮನೆಗಳಿರುವ ನನ್ನೂರು ತುಂಬಾ ಚಿಕ್ಕದು. ಬಹುತೇಕ ಹೆಂಚಿನ ಮನೆಗಳು ಇದ್ದರೂ ಅಲ್ಲೊಂದು ಇಲ್ಲೊಂದು ಮೋಲ್ಡ್ ಮನೆಗಳಿವೆ, ಚಿತ್ರಾನ್ನದಲ್ಲಿ ಸಿಗುವ ಶೇಂಗ ಬೀಜಗಳಂತೆ. ನಾಗರೀಕತೆಯ ಹೆಸರಿಡಲು ಅಲ್ಲಲ್ಲಿ ಲೈಟ್ ಕಂಬಗಳು ಹಾಗೂ ಜಲ್ಲಿ ರಸ್ತೆಗಳೂ ಇವೆ ಹರುಕಲು ಛತ್ರಿಗಳಂತೆ. ಮುಂಜಾನೆ ಎದ್ದು ಕಣ್ಣುಜ್ಜಿಕೊಂಡು ಹೊರಬಂದ ನನಗೆ ಎಲ್ಲರ ಮನೆಯ ಮುಂದೆ ರಂಗೋಲಿ ಸ್ಪರ್ಧೆ ನಡೆಯುತ್ತಿದ್ದಂತೆ ಕಂಡಿತು ಜೊತೆಗೆ ಸ್ಪರ್ಧಾಳುಗಳು ನೀರಿಗಾಗಿ ಬೋರ್ವೆಲ್ ನ ಹತ್ತಿರ ಜಗಳವಾಡುತ್ತಿರುವುದು ಕೇಳಿಸಿತು. ಚಟುವಟಿಕೆಯಿಂದ ಓಡಾಡುತ್ತಿರುವ ಅಜ್ಜಿ ತಾತಂದಿರು, ನೀರಲ್ಲಿ ಆಟವಾಡುತ್ತಿರುವ ಮಕ್ಕಳು, ಒಯ್ಯುವಾಗ ನೀರಿಗೆ ಬಳುಕುವುದನ್ನು ಹೇಳಿಕೊಡುವ ನೀರೆಯರು ಈಗೆ ಯಾವುದೋ 3D ಸಿನಿಮಾ ನೋಡುತ್ತಾ ನಿಂತಿದ್ದ ನನಗೆ ಬೈಯುತ್ತಿರುವ ಶಬ್ಧ ತರಂಗಗಳು ಕೇಳಿಸುತ್ತಿತ್ತು. ತುಂಬಾ ಪರಿಚಿತ ಧ್ವನಿ! ಕೇಂದ್ರೀಕರಿಸಿದೆ, 'ಅಮ್ಮ!' ಮಂಗಳ ಹಾಡುತ್ತಿದ್ದಾರೆ 'ಸೊಂಬೇರಿ, ದರಿದ್ರ ಎಷ್ಟೊತ್ತೊ ಮಲಗೋದು, ನಿನ್ ಕಟ್ಕೊಂಡೋಳ್ ಕೈಗೆ ಚೊಂಬೆ.' ಎಂದು ಬೈದು ಒಳನಡೆದರು. 'ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಸರ್ವಜ್ಞ ' ಎಂಬ ವಾಕ್ಯವನ್ನು ನನ್ನ ದೇಹ ಮತ್ತು ಮನಸ್ಸು ಪಾಲಿಸುತ್ತಿತ್ತು. “ಇದೆಲ್ಲಾ ನಂಗೊಂದು ಮ್ಯಾಟ್ರೆ" ಎಂದು ಹೋಗಿ ಹಲ್ಲುಜ್ಜಿ ನಾಚಿಕೆ, ನಾಜೂಕಿಲ್ಲದೆ ತಿಂಡಿ ತಿಂದೆ.



ಸುಮಾರು ಒಂಬತ್ತು ಗಂಟೆ ರಾತ್ರಿಯ ಸಮಯ ಹಬ್ಬದ ದಿನವಾದ್ದರಿಂದ ನಮ್ಮ ನೆರೆಹೊರೆಯ ನೆಂಟರಿಷ್ಟರೆಲ್ಲಾ ಸೇರಿದ್ದರು. ಊಟವಾಗಿ ಮಲಗುವ ವೇಳೆ ಹಿರಿತಲೆಗಳೆಲ್ಲಾ ತಾಂಬೂಲಗಳನ್ನು ಜಗಿಯುವುದರಲ್ಲಿ ಮಗ್ನರಾಗಿದ್ದರು. ಮಕ್ಕಳಾದ ನಾವೆಲ್ಲ ಒಂದು ಕಡೆ ಸೇರಿ ಮಾತುಕತೆಗಳಲ್ಲಿ ತೊಡಗಿದ್ದೆವು. ನನ್ನ ಚಿಕ್ಕಮ್ಮನ ಮಗನಾದ ರಂಗ, "ಮೇಷ್ಟ್ರೆ, ಒಂದು ಕಥೆ ಹೇಳ್ರಿ" ಎಂದ. ಸಾಮಾನ್ಯವಾಗಿ ನನ್ನೂರಲ್ಲಿ ಎಲ್ಲರೂ ನನ್ನನ್ನು ಸಂಬೋಧಿಸುವುದೇ ಹಾಗೆ, ಅವನು ಕೇಳಿದ್ದೇ ತಡ, ಎಂದೋ ಹೇಳಿದ್ದ ಅಜ್ಜಿಯ ಕಥೆಯನ್ನು ರಿಮೇಕ್ ಮಾಡಿ ಹೇಳಲು ಹೊರಟೆ ನಮ್ಮ ಗಾಂಧಿನಗರದ ಕೆಲವು ನಿರ್ಮಾಪಕರ ಹಾಗೆ...



ಲಾಂಗ್. . ಲಾಂಗ್. . ಸೋ ಲಾಂಗ್ ಎಗೊ ಒಂದು ಊರಿತ್ತು. ಅಲ್ಲಿ ಇಬ್ರು ಫ್ರೆಂಡ್ಸ್ ಇದ್ರು. ಒಂದು ಕಾಗಕ್ಕ ಇನ್ನೊಂದು ಗುಬ್ಬಕ್ಕ ಅಂತ. ಕಾಗಕ್ಕಂದು ಮಡ್ ಹೌಸು ತುಂಬ ವೀಕು, ಗುಬ್ಬಕ್ಕಂದು ಸ್ಟೋನ್ ಬಿಲ್ಡಿಂಗು ಸ್ಟ್ರಾಂಗು. ದುರಾಸೆ, ದುರ್ಬುದ್ಧಿ ತುಂಬಿದ್ದ ಕಾಗಕ್ಕಂದು ವಿಲನ್ ಕ್ಯಾರೆಕ್ಟರ್ರು. ದಯಾಳು, ಸಹನೆ , ಪ್ರೀತಿ ತುಂಬಿದ್ದ ಬುದ್ಧಿವಂತ ಗುಬ್ಬಕ್ಕಂದು ಹೀರೋ ಕ್ಯಾರೆಕ್ಟರ್ರು. ಈಗೆ ಒಂದು ದಿನ ಸಡನ್ಲಿ ಹೆವ್ವಿ ಮಳೆ ಬಂದ್ಬಿಡುತ್ತೆ. ಕಾಗಕ್ಕಂದ್ದು ಮನೆ ಕೊಲ್ಯಾಪ್ಸ್ ಹಾಗುತ್ತೆ. ಕಾಗಕ್ಕ ಗುಬ್ಬಕ್ಕನ ಹತ್ರ ಬಂದು, “ ಓ ಡಿಯರ್ ನನ್ ಮನೆ ಕೊಚ್ಕೊಂಡ್ ಹೋಗಿದೆ, ಈ ಚಿಲ್ಲಡ್ ಅಟ್ಮಾಸ್ಪಿಯರ್ ನಲ್ಲಿ ನಂಗಂತೂ ನಿದ್ದೆ ಬರೊಲ್ಲ. ಸ್ವಲ್ಪ ಮಲಗಕ್ ನಿನ್ ಸ್ಟೋನ್ ಬಿಲ್ಡಿಂಗ್ ನಲ್ಲಿ ಪ್ಲೇಸ್ ಕೊಡು" ಅಂತ ಕೇಳ್ತು. ಅದಕ್ಕೆ ಗುಬ್ಬಕ್ಕ ಮನಸ್ನಲ್ಲಿ " ನೀನ್ ಐನಾತಿ ಇದ್ಯ ನಿನ್ನ ನಾನೇನಾದ್ರು ಒಳ್ಗಡೆ ಕರ್ಕೊಂಡ್ರೆ ನನ್ ಮಕ್ಳುನ ಮರ್ಡ್ರು ಮಾಡ್ಬಿಡ್ತಿಯ.” ಅಂತ ಅನ್ಕೊಂಡು ಹೆಸಿಟೇಟ್ ಮಾಡ್ಕೊಂಡು ಜಾಗ ಕೊಡ್ತು. ತುಂಬಾ ಹುಷಾರಾಗಿ ಮಕ್ಳುನ ತನ್ ಜೊತೆ ರೂಮ್ನಲ್ಲಿ ಲಾಕ್ ಮಾಡ್ಕೊಂಡು ಮಲಗಿ ಹೊರಗಡೆ ಹಾಲ್ ನಲ್ಲಿ ಕಾಗಕ್ಕಂಗೆ ಜಾಗ ಕೊಡುತ್ತೆ. ಹೊಟ್ಟೆ ಹಸ್ಕೊಂಡಿದ್ದ ಕಾಗಕ್ಕ ಶೋಕೆಸು, ಅಲ್ಮೇರಾ, ಅಡುಗೆ ಮನೆನೆಲ್ಲಾ ಚೆಕ್ ಮಾಡಿ ಕೊನೆಗೆ ಸ್ಟೋರ್ ರೂಮ್ ನಲ್ಲಿ ಗುಬ್ಬಕ್ಕಂದು ಮೂರು ಮೊಟ್ಟೆ ಸಿಗುತ್ತೆ, ಸ್ಟೌವ್ ಹಚ್ಚಿ ಆಮ್ಲೇಟ್ ಮಾಡ್ಕೊಂಡ್ ತಿಂದು ಮಲಗಿ ಬೆಳಗ್ಗೇನೆ ಎಸ್ಕೇಪ್ ಆಗಿ ಹೋಯ್ತು. ಇತ್ತ ಮಾರ್ನಿಂಗು ಮಕ್ಳು ಜೊತೆ ಎದ್ದ ಗುಬ್ಬಕ್ಕ ಹೊರಗಡೆ ಬಂದು ಆಗಿರೊ ಅನಾಹುತಾನ ನೋಡಿ ಈ ಕಾಗಕ್ಕನ್ಗೆ ಪಾಠ ಕಲಿಸ್ಬೇಕು ಅಂತ ಹೇಳಿ MTR ದು ಅಚ್ಚು ಮೆಣಸಿನಖಾರದ ಪುಡೀನ ಗೋಲ್ಡ್ ವಿನ್ನರ್ ಆಯಿಲ್ ಜೊತೆ ಚೆನ್ನಾಗಿ ಕಾಯಿಸಿ ಕಾಗಕ್ಕನ್ನ "ಕಾಗಕ್ಕ ನಿಂಗೆ ಮಳೇಲಿ ನೆಂದು ನೆಂದು ತುಂಬಾ ಕೊಲ್ಡ್ ಆಗಿದೆ ಬಾ ಮನೆಗೆ ನಿಂಗೆ ಗ್ರೀನ್ ಟೀ ಮಾಡಿಕೊಡ್ತಿನಿ" ಅಂತ ಮೊಬೈಲ್ ನಲ್ಲಿ ಕಾಲ್ ಮಾಡ್ತು. ಡಮ್ಮಿ ಪೀಸ್ ಕಾಗಕ್ಕಂಗೆ ಇದೆಲ್ಲ ಎಲ್ಲಿ ಅರ್ಥ ಆಗ್ಬೇಕು? ಹಿಂದೆ ಮುಂದೆ ನೋಡದೆ ಗುಬ್ಬಕ್ಕನ ಮನೆಗೆ ಬಂತು. ಗುಬ್ಬಕ್ಕ "ಬಾಯಿ ತೆಗಿ ಕಾಗಕ್ಕ ಹಾಕ್ತಿನಿ" ಅಂತ ಹೇಳ್ತು. ಕಾಗಕ್ಕ ಬಾಯಿ ತೆಗೆದದ್ದೇ ತಡ ಎಲ್ಲಾ ಆಯಿಲ್ ನು ಬಾಯಿಗೆ ಸುರಿದ್ಬಿಡ್ತು ಗುಬ್ಬಕ್ಕ. ಇತ್ತ ಉರಿ, ಪೇನ್ ತಡೆಯೋಕಾಗ್ದಲೆ ಕಾಗಕ್ಕ ಕಾ... ಕಾ... ಅಂತ ಅರಚ್ಕೊಂಡು ಹೋಗುತ್ತೆ. 'ಅದುಕ್ಕೆ ಅದರ ಬಾಯಿ ಇವತ್ತಿಗೂ ರೆಡ್ ಕಲರ್ ಇದೆ!' ಅಂತ ಹೇಳಿ ನನ್ನ ಕಥೆ ಮುಗಿಸಿದೆ. ಎಲ್ಲರೂ ಚಪ್ಪಾಳೆ ತಟ್ಟಿ ಬೇಷ್ ಎಂದರೂ ಗೋಡೆಯೊರಗಿ ಕುಳಿತ ಅಜ್ಜಿ ನಗುತ್ತಿದ್ದರು. ಗಮನಿಸಿದೆ ಹಾಸ್ಯ ನಗುವಲ್ಲ! ವ್ಯಂಗ್ಯ ನಗುವಾಗಿತ್ತು. ಮನಸ್ಸಿನಲ್ಲಿ ಕಸಿವಿಸಿ ಉಂಟಾಯಿತು ಮತ್ತು "ಈ ಹಳೇ ಕಾಲದವರೆಲ್ಲಾ ಹೀಗೆ, ನಾವೇನ್ ಮಾಡಿದ್ರು ಇಷ್ಟ ಪಡಲ್ಲ.” ಅಂತ ಅಂದ್ಕೊಂಡು ಸುಮ್ಮನಾದೆ. ಕದಡಿದ ಮನಸ್ಸಿನಲ್ಲೇ ನಿದ್ದೆ ಮಾಡತೊಡಗಿದೆ.



"ತಬ್ಬಲಿಯು ನಿನಾದೆ ಮಗುವೆ ಹೆಬ್ಬುಲಿಯ ಬಾಯಲ್ಲಿ ಹೋಗುವೆ..." ಎಂಬ ಹಾಡನ್ನು ಗುಬ್ಬಚ್ಚಿಯು ತನ್ನ ಮರಿಗೆ ಹೇಳುತ್ತಿತ್ತು. ಇದೇಕೆ ಈ ಗುಬ್ಬಚ್ಚಿ ಪುಣ್ಯಕೋಟಿಯ ಹಾಡು ತಾನು ಹೇಳುತ್ತಿದೆ ಎಂದು ನೋಡಿದೆ ಎದುರುಗಡೆ ಹುಲಿಯ ವೇಷದಲ್ಲಿ ನಾನಿದ್ದುದನ್ನು ಕಂಡು ದಿಗ್ಭ್ರಮೆಗೊಂಡೆ! ಅಜ್ಜಿ ಪುಣ್ಯಕೋಟಿಯನ್ನು ಕಾಪಾಡುವ ಕೃಷ್ಣನಂತೆ ದೂರದಲ್ಲಿ ನಿಂತು ನಗುತ್ತಿದ್ದರು ಅದೇ ವ್ಯಂಗ್ಯ ನಗೆ. ಅಮ್ಮ ಬೇರೆ ಪಕ್ಕದಲ್ಲಿ ನಿಂತು "ಎದ್ದೇಳೋ ಬೇಗ ಹೂ ತಗೊಂಡ್ ಬಾ ಪೂಜೆಗೆ ಹೋಗಿ ಎದ್ದೇಳೊ. . . ಎದ್ದೇಳೋ. . . "ಅಂತ ಹತ್ತಿರ ಬಂದು ಒಂದು ಗೂಸ ಕೊಟ್ಟೇಬಿಟ್ಟರು. ತಕ್ಷಣ ಮೇಲೆದ್ದು ಕುಳಿತೆ ಅಮ್ಮ ಇನ್ನು ಬೈಯುತ್ತಲೇ ಇದ್ದರು. ಇದೆಲ್ಲಾ ಕನಸೇ! ಎಂದು ನಿಟ್ಟುಸಿರು ಬಿಟ್ಟು ಎದ್ದು ಹೊರಟೆ. ಕೆಲಸವೆಲ್ಲಾ ಮುಗಿಸಿ ಅಜ್ಜಿಯ ಮನೆಗೆ ಹೋಗಿ ಅಜ್ಜಿಗೆ "ಅಜ್ಜಿ ಯಾಕಜ್ಜಿ ನೆನ್ನೆ ನಾನು ಹೇಳಿದ ಕಥೆ ಚೆನ್ನಾಗಿರ್ಲಿಲ್ವ?" ಅಂತ ಕೇಳಿದೆ. ಅದಕ್ಕೆ ಅಜ್ಜಿ ಮುಗುಳ್ನಗುತ್ತ "ಊಟ ಮಾಡು ಬಾ ಮಗು" ಅಂದ್ರು. "ಇಲ್ಲ ನೀನು ಹೇಳು ನಾನ್ ಆಮೇಲ್ ಊಟ ಮಾಡ್ತಿನಿ" ಎಂದು ಹೇಳಿದೆ. ಅದಕ್ಕೆ "ಇಲ್ಲ ಮಗ ಮೊದ್ಲು ಊಟ ಮಾಡು ನಾನು ಹೇಳ್ತಿನಿ" ಎಂದು ಮತ್ತೇ ಅದನ್ನೇ ಹೇಳಿದ್ದರಿಂದ ಸರಿ ಆಯ್ತು ಎಂದು ಕುಳಿತೆ. ಅಜ್ಜಿ ಊಟಕ್ಕೆ ತಟ್ಟೆ ಇಟ್ಟು ಮೊದಲು ಮುದ್ದೆ ಇಟ್ಟು ನಂತರ ಸಾರು ಹಾಕದೆ ಅನ್ನ ಸುರಿದರು ಮುದ್ದೆಯ ಮೇಲೆಯೆ!!!

"ಯಾಕಜ್ಜಿ ? ಸಾರು ಬಿಡೋದಿಲ್ವಾ" ಎಂದು ಕೇಳಿದೆ. ಅದಕ್ಕೆ ಅಜ್ಜಿ ಸಾರು ತಂದು ಸುರಿದರು. ನಾನಂದುಕೊಂಡೆ ಈ ಅಜ್ಜಿಗೆ ಏನಾದ್ರು ತಲೆ ಕೆಟ್ಟಿದಿಯೇ ಅನ್ನ ಮುದ್ದೆ ಎರಡು ಒಂದೇ ಸಾರಿ ತಿನ್ನಾಕ್ಕಾಗುತ್ತಾ ಎಂದು ಅಜ್ಜಿಗೆ ಹೇಳಿದೆ. "ಅಜ್ಜಿ ಏನಿದು? ಊಟಾನ, ಕಲಗಚ್ಚಾ? ಎರಡು ಒಟ್ಟಿದೆ ಹಾಕಿದ್ರೆ ಹೆಂಗೆ ತಿನ್ಲಿ" ಎಂದೆ. ಅದಕ್ಕೆ ಅಜ್ಜಿ ಹೇಳಿದರು "ಮಗಾ, ನೆನ್ನೆ ನೀನು ಹೇಳಿದ ಕಥೆ ಹೀಗೆ ಇತ್ತು ಮಗಾ ಕಲಗಚ್ಚು ಇದ್ದಹಾಗೆ" ಎಂದರು. ನನ್ನ ತಲೆಯ ಮೇಲೆ ಹಿಮಾಲಯ ಪರ್ವತವೇ ಅಪ್ಪಳಿಸಿದಂತಾಯ್ತು. ಸುಮಾರು 75 ರ ಮುದುಕಿಗೆ ಇಷ್ಟೊಂದು ಸಮಯ ಪ್ರಜ್ಞೆಯೇ ಎಂದೆನಿಸಿತು ಅಜ್ಜಿ ಮುಂದುವರಿಸುತ್ತಾ "ನಮ್ಮ ಭಾಷೆ , ನಮ್ಮ ಸಂಸ್ಕೃತಿ ನಮ್ಮ ಮಣ್ಣಿಗೆ ತನ್ನದೇ ಆದ ಬೆಲೆಯಿದೆ ಅದಕ್ಕೆ ಕಡ್ಡಿ ಕಸಗಳನ್ನು ಬೆರೆಸಿ ಕಲಗಚ್ಚು ಮಾಡಬೇಡ ಯಾವುದಾದರು ಒಂದು ಭಾಷೆಯಲ್ಲಿ ಮಕ್ಕಳಿಗೆ ಕಥೆ ಹೇಳು, ಇಲ್ಲದಿದ್ದರೆ ಅರ್ಥವಾಗುವುದಿಲ್ಲ. ಮಕ್ಕಳಿಗೆ ಹೇಳಿಕೊಡುವ ಮೇಷ್ಟ್ರಾಗಿ ನೀನು ಯಾವತ್ತೂ ಈ ರೀತಿ ತಪ್ ಮಾಡ್ಬಾರ್ದು" ಎಂದು ಅಪ್ರಿಯವಾದ ಸತ್ಯವನ್ನು ಹೇಳಿದರು. ದೀರ್ಘಕಾಲದ ತಪಸ್ಸು ಮಾಡಿ ಶಿವನಿಂದ ಆತ್ಮಲಿಂಗವನ್ನು ಪಡೆದು ಕೊನೆಗೆ ತನ್ನ ತಾಯಿಗೆ ಅದನ್ನು ತಲುಪಿಸಲಾಗದೆ ಭೂಸ್ಪರ್ಶವನ್ನು ಮಾಡಿದ ಆತ್ಮಲಿಂಗವನ್ನು ಎತ್ತಲಾಗದ ರಾವಣನ ಪರಿಸ್ಥಿತಿ ನನ್ನದಾಗಿತ್ತು.

ಮನಸ್ಸಿನಲ್ಲಿ ಏನೋ ಒಂದು ಚಿತ್ರಣ ಮೂಡತೊಡಗಿತು. ರಾತ್ರಿಯಲ್ಲಿ ಬಿದ್ದ ಕನಸಿಗೂ ಅಜ್ಜಿ ಹೇಳಿದ ಮಾತುಗಳಿಗೂ ಕೊಂಡಿಯಿರುವಂತೆ ಕಂಡಿತು. ಆ ಪುಟ್ಟ ಗುಬ್ಬಚ್ಚಿಯೇ ನಮ್ಮ ಸಂಸ್ಕೃತಿ, ಭಾಷೆ, ಧರ್ಮಗಳನ್ನು ಸೂಚಿಸುವ ಪ್ರತೀಕದಂತೆ ಕಾಣಿಸುತ್ತಿತ್ತು ಪುಣ್ಯಕೋಟಿಯ ಹಾಗೆ. ಅದನ್ನು ಕೊಲ್ಲುವ ಹುಲಿಯ ಸ್ಥಾನದಲ್ಲಿ ನಾನಿದ್ದೆ. ಕಾರಣ ನಮ್ಮ ಸಂಸ್ಕೃತಿ ಭಾಷೆಗಳನ್ನು ನಾನು ಹಾಳುಮಾಡುತ್ತಿರುವ ರೀತಿಯನ್ನು ಎತ್ತಿ ತೋರಿಸುತ್ತಿತ್ತು.



ನನಗೆ ಎರಡು ವಿಷಯಗಳು ಸ್ಪಷ್ಟವಾಗಿ ಕಾಣತೊಡಗಿತು. ಒಂದು ಗುಬ್ಬಿಯಂತಹ ಅಮಾಯಕ ಚಿಕ್ಕ ಪಕ್ಷಿಗಳ ಸಂಕುಲದ ಮೇಲೆ ನಾವು ನಡೆಸುತ್ತಿರುವ ದೌರ್ಜನ್ಯಗಳು ಹಾಗೂ ನನ್ನ ಭಾಷೆ ಮತ್ತು ಸಂಸ್ಕೃತಿಯ ಮೇಲೆ ಆಗುತ್ತಿರುವ ಅನಾಚಾರಗಳನ್ನು ನೋಡಿದಾಗ ಹೆಚ್ಚು ಕಡಿಮೆ ಎರಡು ವಿಷಯಗಳ ಸ್ಥಿತಿ ಅಧೋಗತಿಗಿಳಿದಿರುವ ಸತ್ಯ ನನಗರಿವಾಯಿತು. ಮನಸ್ಸು ಚಡಪಡಿಸತೊಡಗಿತು, ಎಂತಹ ಸ್ಥಿತಿಯಲ್ಲಿ ನಾನಿದ್ದೇನೆ! ಎಂದು ತುಂಬಾ ನೋವಾಗಿ ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆನಿಸಿತು. ನನ್ನ ಸಂಸ್ಕೃತಿಯನ್ನು ಉಳಿಸುವೆನೋ ಬಿಡುವೆನೋ ನನಗೆ ತಿಳಿದಿಲ್ಲ ಆದರೆ ಏನಾದರಾಗಲಿ ಇಂದು ಒಂದು ಗುಬ್ಬಿಯನ್ನಾದರು ನೋಡಲೇಬೇಕೆಂಬ ಹಂಬಲ ಕಾಡತೊಡಗಿತು.


ಮನೆಯ ಮೇಲ್ಛಾವಣಿ ಹುಡುಕಿದೆ, ಇಲ್ಲ! ಹೊರಗಡೆ ಜಗುಲಿಯಲ್ಲಿ ಇಲ್ಲ! ದಾಳಿಂಬೆ ಗಿಡಗಳಲ್ಲಿ ಆಟವಾಡುತ್ತಿದ್ದ ನೆನಪಾಗಿ ಅತ್ತ ಸಾಗಿ ನೋಡಿದೆ ಅಲ್ಲೂ ಇಲ್ಲ! ಗಿಡ, ಮರ, ಕೊನೆಗೆ ವಿದ್ಯುತ್ ತಂತಿಗಳ ಮೇಲೂ ಹುಡುಕಾಡಿದೆ ಎಲ್ಲೂ ಗುಬ್ಬಿಗಳ ಸುಳಿವೇ ಇಲ್ಲ. ನನ್ನ ಬಾಲ್ಯದ ಚಿತ್ರಣ ಒಮ್ಮೆ ಕಣ್ಣ ಮುಂದೆ ಬಂದ ಹಾಗಾಯಿತು. ಮನೆಯ ಒಳಗೂ, ಹೊರಗೂ ಯಾವುದೇ ಭಯವಿಲ್ಲದೆ ಹಾರಾಡುತ್ತಿದ್ದ ಗುಬ್ಬಿಗಳು, ಮನೆಯ ಮೇಲ್ಛಾವಣಿಯಲ್ಲಿ ಗೂಡು ಕಟ್ಟಿ ಮರಿ ಮಾಡುತ್ತಿದ್ದವು. ಅವುಗಳನ್ನು ಹತ್ತಿರದಿಂದ ನೋಡುವ ಹಂಬಲವಿದ್ದರಿಂದ ಮನೆಯಲ್ಲಿರುವ ನುಚ್ಚಕ್ಕಿಯನ್ನು ತಂದು ಜಗುಲಿಯಲ್ಲಿ ಎರಚಿ, ಬಳಿಯಲ್ಲೇ ಕುಳಿತಿರುತ್ತಿದ್ದೆ. ಗುಂಪುಗುಂಪಾಗಿ ಬರುತ್ತಿದ್ದ ಗುಬ್ಬಿಗಳು ಯಾವುದೇ ಭಯವಿಲ್ಲದೆ ಬಂದು ತಿನ್ನುತ್ತಿದ್ದವು. ಅಂದೇ ನಾನು ಅವುಗಳನ್ನು ತುಂಬಾ ಹತ್ತಿರದಿಂದ ನೋಡಿದ್ದು. ತುಂಬಾ ಮುದ್ದಾಗಿ ಕಾಣುವ ಈ ಪಕ್ಷಿಗಳೂ ಯಾವಾಗಲೂ ಜೊತೆಗಿರುತ್ತಿದ್ದವು. ಕಂದು ಮತ್ತು ಕಪ್ಪುಬಿಳಿ ಮಿಶ್ರಿತ ಬಣ್ಣದಿಂದ ಕಂಗೊಳಿಸುವ ಹೆಣ್ಣು ಗುಬ್ಬಿಗೆ ಅದನ್ನೇ ಹೋಲುತ್ತಿದ್ದ ಕುತ್ತಿಗೆಯ ಕೆಳಭಾಗದಲ್ಲಿ ಮಾತ್ರ ಕಪ್ಪು ಬಣ್ಣ ಹೊಂದಿದ್ದ ಗಂಡು ಗುಬ್ಬಿ ಗೂಡನ್ನು ಸಂರಕ್ಷಿಸಲು ನೆರವಾಗುತ್ತಿತ್ತು. ಮೊಟ್ಟೆ ಇಟ್ಟು ಮರಿ ಮಾಡಿ ಆ ಮರಿಗಳಿಗೆ ಹಾರಲು ಕಲಿಸುವವರೆಗೂ ಆದರ್ಶ ದಂಪತಿಗಳಂತೆ ಜೊತೆಗಿರುತ್ತಿದ್ದವು. ಮನೆಯೊಳಗೆ ಇಟ್ಟಿರುವ ಅಕ್ಕಿಮೂಟೆಗಳನ್ನು ಕೊರೆದು, ತಿಂದು, ಹೊರಗೆ ಬಂದು ಒಣಮರಗಳ ಸಂಧಿಗಳಲ್ಲಿ ಕಟ್ಟಿರುವ ಗೆದ್ದಲಿನ ಹುಳುಗಳನ್ನು ಹುಡುಕಾಡಿ, ನುಣುಪಾದ ಹುಡಿಮಣ್ಣು ಸಿಕ್ಕರೆ ಹೊರಳಾಡಿ, ನೀರು ಸಿಕ್ಕೊಡನೆ ಪಟಪಟನೆ ರೆಕ್ಕೆ ಅಗಲಿಸಿ ಮುಳುಗು ಹಾಕಿ ಸ್ನಾನ ಮಾಡುತ್ತಿದ್ದವು. ಇಷ್ಟೆಲ್ಲಾ ಧವಸಧಾನ್ಯ ಲೂಟಿಮಾಡುತ್ತಿದ್ದರೂ ಮನೆಮಂದಿಯೆಲ್ಲಾ ಅವುಗಳೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದರು. ಹುಷ್... ಹುಷ್... ಎಂದು ಸದ್ದು ಮಾಡಿ ಓಡಿಸುತ್ತಿದ್ದರೇ ವಿನಹ ಅವುಗಳಿಗೆ ಹಾನಿ ಮಾಡುತ್ತಿರಲಿಲ್ಲ. ಎಲ್ಲರ ಕಣ್ಣಲ್ಲೂ ಗುಬ್ಬಿ ಎಂದರೆ ಪಾಪದ್ದು ! ಎಂಬ ಭಾವನೆ, ಅದೇನು ಮಹಾ ತಿಂದೀತು ಎಂಬ ಉದಾರತೆ ತೋರುತ್ತಿದ್ದರು. ಬಂದನದಲ್ಲಿದ್ದರೂ ಮನುಷ್ಯನ ಜೊತೆಯಲ್ಲಿರುವ ಕೆಲವು ಪಕ್ಷಿಗಳಿಗಿಂತ ಬಂಧನವೇ ಇಲ್ಲದೆ ಮನುಷ್ಯನ ಸಹವಾಸ ಇಷ್ಟಪಡುತ್ತಿದ್ದ ಏಕೈಕ ಪಕ್ಷಿ ಗುಬ್ಬಿ. ಅಂದು ಮನುಷ್ಯನೊಂದಿಗೆ ಅಷ್ಟು ಆಳವಾದ ನಿಕಟ ಸಂಪರ್ಕ ಹೊಂದಿದ್ದ ಗುಬ್ಬಿಗಳು, ಮನೆಯಿಂದ ಓಡಿಸಿದರೂ ಹೋಗದಿದ್ದ ಗುಬ್ಬಿಗಳು ಇಂದು ನಾನು ಅವುಗಳಿಗಾಗಿ ಮನೆ, ಮರ, ಗಿಡ ತೋಟ ತುಡಿಕೆಗಳನ್ನೆಲ್ಲಾ

ಜಾಲಾಡಿದರೂ ಅವುಗಳ ಸುಳಿವೇ ಸಿಗುತ್ತಿಲ್ಲ. ಚೆನ್ನಬಸವೇಶ್ವರ ಗುರುಗಳ ಕಥೆ ಕೇಳುತ್ತಾ ಕೇಳುತ್ತಾ ಪ್ರಾಣತ್ಯಾಗಮಾಡಿ ನಮ್ಮ ತಾಲ್ಲೂಕಿಗೆ 'ಗುಬ್ಬಿ' ಎಂಬ ಹೆಸರನ್ನು ತಂದು ಕೊಟ್ಟ ಸಣ್ಣ ಪಕ್ಷಿ ಇಂದು ಎಲ್ಲೂ ಕಾಣಸಿಗುತ್ತಿಲ್ಲ.

ಹಾಗಾದರೆ ಏನಾಯಿತು? ಈ ಜೀವಿಗಳು ಎಲ್ಲಿಗೆ ಹೋದವು? ಇದಕ್ಕೆ ಕಾರಣ ಯಾರು? ಯಾರು!? ಹೌದು ನಾನೆ, ನಾನೆಯೇ ಇದಕ್ಕೆ ಮೂಲಕಾರಣ ಎಂದು ನನ್ನ ಅಂತಃಕರಣ ಮಾತಾಡತೊಡಗಿತು. ನನ್ನೊಬ್ಬನ ಸ್ವಾರ್ಥಕ್ಕಾಗಿ, ವೈಭೋಗ ಜೀವನಕ್ಕಾಗಿ ನನ್ನ ಸ್ವಭಾವದ ಜೊತೆಗೆ ಹೆಂಚು, ಗುಡಿಸಲುಗಳನ್ನುರುಳಿಸಿ ಕಾಂಕ್ರಿಟ್ ನಿಂದ ಸಾಮ್ರಾಜ್ಯವನ್ನು ನಿರ್ಮಿಸಿದೆ. ಪಾಶ್ಚಾತ್ಯ ಶೈಲಿಗೆ ಮಾರು ಹೋದ ನಾನು ಸದಾ ನಮ್ಮ ಸಂಸ್ಕೃತಿಯನ್ನು ಕೀಳು ಭಾವನೆಯಲ್ಲಿ ನೋಡುವ ಮನೋವೃತ್ತಿಯನ್ನು ಬೆಳೆಸಿಕೊಂಡೆ. ತಾಂತ್ರಿಕತೆ ಹಾಗೂ ವಿಜ್ಞಾನದ ಹೆಸರಿನಲ್ಲಿ ಎಷ್ಟೊ ಪಕ್ಷಿಕಾಶಿಗಳನ್ನು ನುಂಗಿ ನೀರು ಕುಡಿದೆ. ಜಾಗತೀಕತೆಯ ಸೋಗಿನಲ್ಲಿ ಹಸಿರು ಸಾಮ್ರಾಜ್ಯವನ್ನು ಗುಡಿಸಿ ಗುಂಡಾಂತರ ಮಾಡಿದೆ. ಉಸಿರಾಡೋ ಗಾಳಿ, ಕುಡಿಯುವ ನೀರು, ಕೇಳೋ ಶಬ್ಧ ಎಲ್ಲವನ್ನೂ ಕಲುಷಿತಗೊಳಿಸಿ ಪ್ರಕೃತಿಯ ಮೇಲೆ ಸದಾ ಶೋಷಣೆಯಲ್ಲೇ ತೊಡಗಿ ಸರ್ವಾಧಿಕಾರಿಯಂಥೆ ವರ್ತಿಸಿದೆ. ಇಂತಹ ದುರಾತ್ಮನ ಆಡಳಿತದಲ್ಲಿ ಅಮಾಯಕ ಪುಟ್ಟ ಗುಬ್ಬಿ ಹೇಗೆ ತಾನೆ ಬದುಕಿರಲು ಸಾಧ್ಯ? ಇಂತಹ ದುಸ್ಥಿತಿಗೆ ಕಾರಣನಾದ ನನಗೆ ಶಿಕ್ಷೆಯೇ ಇಲ್ಲವೆ? ಇಂದು ಗುಬ್ಬಿ, ನಾಳೆ ನವಿಲು, ಕಾಗೆ, ನರಿ, ಹುಲಿ, ಹಸು, ಆನೆ ಹೀಗೆ ಎಲ್ಲವನ್ನೂ ಕಳೆದುಕೊಂಡು ಅನಾಥನಾಗುವೆ, ಎಂಥಹ ಪಾಪಿ ನಾನು! ಮನಸ್ಸು ತುಂಬಾ ಭಾರವಾಯಿತು, ಮಾತು ಮೌನವಾಯಿತು, ಕಣ್ಣುಗಳು ತುಂಬಿ ಮಂಜಾದವು. ರಾತ್ರಿಯಾದರೂ ಊಟಮಾಡುವ ಮನಸ್ಸಾಗಲಿಲ್ಲ. ಅಜ್ಜಿಯನ್ನು ನೋಡಲೊರಟೆ, ಮನೆಯಂಗಳದಲ್ಲಿ ಕುಳಿತಿದ್ದ ಆಕೆಯ ಮಡಿಲಲ್ಲಿ ಮಲಗಬೇಕೆನಿಸಿತು, ಮಾತು ಬರದ ಮೂಕನಾಗಿ ಮಡಿಲಲ್ಲಿ ಮಲಗಿದೆ. ಅಜ್ಜಿ ನನ್ನ ತಲೆ ಸವರಿ ನಕ್ಕು ಕಥೆ ಹೇಳತೊಡಗಿದರು. ಗಾಢವಾಗಿ ಕವಿದಿದ್ದ ಕತ್ತಲಿಗೆ ಆಶಾಕಿರಣಗಳೆಂಬ ನಕ್ಷತ್ರಗಳು ಗೋಚರಿಸತೊಡಗಿದವು...!.



- ಮಧುಸೂದನ .ಎಚ್ .ಸಿ



# ಏಡಿ ಜೇಡ

ಏಡಿ ಜೇಡಕ್ಕೆ ಈ ಹೆಸರು ಬರಲು ಅದು ತನ್ನ ಎರಡು ಕಾಲುಗಳನ್ನು ಏಡಿಯಂತೆ ಇಟ್ಟುಕೊಂಡು ಏಡಿಯ ರೀತಿ ಅಕ್ಕ ಪಕ್ಕಕ್ಕೆ, ಹಿಂದೆ ಮುಂದೆ ಚಲಿಸುವುದೇ ಕಾರಣ. ಏಡಿ ಜೇಡವು "ಥಾಮಸೀಡೆ" ಕುಟುಂಬ ವರ್ಗಕ್ಕೆ ಸೇರಿದೆ. ಇವು ನಮ್ಮ ಮನೆಯ ಇತ್ತಲು, ಕಾಡು, ಹುಲ್ಲುಗಾವಲು ಮತ್ತು ಕುರುಚಲು ಕಾಡುಗಳಲ್ಲಿ ಹಾಗೂ ಬೆಟ್ಟ ಪ್ರದೇಶದ ಆವಾಸಗಳಲ್ಲಿ ಕಾಣಸಿಗುತ್ತದೆ. ಈ ಜೇಡಗಳು ಬಲೆ ಕಟ್ಟುವುದಿಲ್ಲ ಬದಲಾಗಿ ಹೊಂಚುಹಾಕಿ ಬೇಟೆಯಾಡಿ ಆಹಾರ ಸಂಗ್ರಹಿಸುತ್ತವೆ. ಆಹಾರವನ್ನು ಅವು ಹುಡುಕಿಕೊಂಡು ಹೋಗದೆ, ಆಹಾರವೇ ಅದರ ಬಳಿ ಬರುವಂತೆ ಕಾದು ಕುಳಿತು ಕ್ಷಣಾರ್ಧದಲ್ಲಿ ಬೇಟೆಯ ಮೇಲೆ ಎರಗಿ ತನ್ನ ಉದ್ದವಾದ ಕಾಲುಗಳಿಂದ ಬೇಟೆಯಾಡಿ ಬಾಚಿ ಹಿಡಿದು ಸುಲಭವಾಗಿ ತಿನ್ನುತ್ತದೆ.





ಏಡಿ ಜೇಡಗಳು ತಾವು ಬದುಕುವ ಆವಾಸಕ್ಕೆ ಹೋಲುವಂತೆ ಛದ್ಮವೇಷ ಧರಿಸುವುದರಲ್ಲಿ ಕಿಲಾಡಿಗಳು. ಕೆಲವು ಹೂಗಳ ಬಣ್ಣದಂತೆ ಮಾರ್ಪಡಿಸಿಕೊಂಡಿದ್ದರೆ ಇನ್ನೂ ಕೆಲವು ಹಕ್ಕಿಯ ಹಿಕ್ಕೆಯಂತೆ, ಕೆಲವು ಜೇಡಗಳು ಹುಲ್ಲಿನ ಬೀಜಗಳಂತೆ ಕಾಣಿಸುತ್ತವೆ. ಇನ್ನೂ ಕೆಲವು ನಿಧಾನವಾಗಿ ತಾನು ಕುಳಿತ ಹೂವಿನ ಬಣ್ಣಕ್ಕೆ ತನ್ನ ಬಣ್ಣವನ್ನು ಬದಲಿಸಕೊಳ್ಳಬಲ್ಲವು.!.

ಹೂ ಏಡಿ ಜೇಡಗಳು ಹೂವಿನ ಮೇಲೆ ಅಡಗಿ ಕುಳಿತು ಹೂವಿನ ಬಳಿ ಮಕರಂದವನ್ನು ಹೀರಲು ಬರುವ ನೊಣ, ಜೇನ್ನೊಣ, ಚಿಟ್ಟೆಗಳನ್ನು ಹಿಡಿದು ತಿನ್ನುತ್ತದೆ. ಬೇಟೆ ಕಣ್ಣಿಗೆ ಬಿದ್ದರೆ ಬಲು ನಿಧಾನವಾಗಿ ಅದರ ಬಳಿಸಾಗಿ ಚಕ್ಕನೆ ಹಿಡಿಯುತ್ತದೆ. ತಪ್ಪಿಸಿಕೊಳ್ಳಲು ಪ್ರಯತ್ನಿಸುವ ಕೀಟಗಳಿಗೆ ವಿಷವನ್ನು ಚುಚ್ಚಿ ಪ್ರಜ್ಞೆ ತಪ್ಪಿಸುತ್ತದೆ.

'ಹಕ್ಕಿ ಹಿಕ್ಕೆ ಏಡಿ' ಜೇಡವು ಅಗಲವಾದ ಎಲೆಯ ಮೇಲೆ ಹಕ್ಕಿಯ ಹಿಕ್ಕೆಯಂತೆ ಕುಳಿತಿರುತ್ತವೆ. ಸಾಮಾನ್ಯವಾಗಿ ಕೆಲವು ಹಕ್ಕಿ ಹಿಕ್ಕೆ ಏಡಿ ಜೇಡಗಳು ತಿಳಿ ಬಣ್ಣವನ್ನು ಹೊಂದಿದ್ದರೆ ಇನ್ನು ಕೆಲವು ಬಣ್ಣಬಣ್ಣದ ಆಕಾರಕ್ಕೆ ಹಕ್ಕಿಯ ಹಿಕ್ಕೆಯಲ್ಲಿರುವ ಸಣ್ಣ ಬೀಜಗಳನ್ನು ಮಿಮಿಕ್ ಮಾಡಿ ತಾನು ಕುಳಿತ ಜಾಗದಲ್ಲಿ ಯಾರಿಗೂ ಕಾಣದಂತೆ ಮಾಡಿಕೊಂಡಿವೆ.

ಕೆಲವು ಬಾರಿ ಇವು ಕುಳಿತಲ್ಲೇ ವಾರಗಟ್ಟಲೇ ಕದಲದೇ ಅದೇ ಸ್ಥಳದಲ್ಲಿ ಕುಳಿತಿರುತ್ತವೆ. ಆಕಾಶದಲ್ಲಿ ಹಾರುವ ಹಕ್ಕಿಗಳ ಕಣ್ಣಿಗೆ ಕಾಣದೆ ಇರಲು ಇವುಗಳ ನಿಶ್ಚಲ ಸ್ಥಿತಿಯು ಕಾರಣವಾಗಿದೆ. ಏಡಿ ಜೇಡಗಳಲ್ಲಿ ಹೆಣ್ಣು ಗಂಡುಗಳು ಗಾತ್ರ ಮತ್ತು ಬಣ್ಣದಲ್ಲಿ ಬೇರೆ ಬೇರೆಯಾಗಿರುತ್ತದೆ. ಸಾಮಾನ್ಯವಾಗಿ ಗಂಡು ಜೇಡಗಳು ಹೆಣ್ಣು ಜೇಡಕ್ಕಿಂತ ಚಿಕ್ಕದಾಗಿರುತ್ತದೆ. ಉದಾಹರಣೆಗೆ ಬಿಳಿ ಏಡಿ ಜೇಡದ ಹೆಣ್ಣು ಹೆಸರೇ ಹೇಳುವಂತ ಬಿಳಿಯಾಗಿದೆ. ಇದೇ ಜಾತಿಯ ಗಂಡು ಬೂದು ಬಣ್ಣ ಹೊಂದಿದ್ದು ಗಂಡು ಹೆಣ್ಣಿಗಿಂತ ಶೇಕಡ 70ರಷ್ಟು ಕಡಿಮೆ ಇರುತ್ತದೆ. ಹೆಣ್ಣು ಗಂಡು ಕೂಡಿದ ಒಂದು ವಾರದ ನಂತರ ಹೆಣ್ಣು ಜೇಡದ ಬಲೆಯ ಚೀಲದಲ್ಲಿ ಮೊಟ್ಟೆಯಿಟ್ಟು, ಅದರ ಬಳಿಯೇ ಕಾದು ಕುಳಿತು ಶತ್ರುಗಳಿಂದ ಮೊಟ್ಟೆಗಳನ್ನು ರಕ್ಷಿಸುತ್ತದೆ.

ಏಡಿ ಜೇಡವು ಬೇಟೆಯಾಡುವ ವೀಡಿಯೋ ತುಣುಕನ್ನು ನೋಡಲು ಲಿಂಕನ್ನು ಕ್ಲಿಕ್ಕಿಸಿ.
https://www.youtube.com/watch?v=O9B_9XxZKJ8









- ವಿಪಿನ್ ಬಳಿಗ



# ಕಾಣೆಯಾಗುತ್ತಿರುವ ಕಾಡುಮಾವು

ವಸಂತ ಕಾಲ ಬಂತೆಂದರೆ ಸಾಕು ಎಲೆಗಳೆಲ್ಲಾ ತಾಮ್ರ ವರ್ಣಕ್ಕೆ ತಿರುಗಿ, ದಿನಕಳೆದಂತೆ ಹಸಿರು ಎಲೆಗಳ ಹೊದಿಕೆಯಲ್ಲಿ ಮೈತುಂಬಿ ನೋಡಲು ಆಕರ್ಷಕವಾಗಿ, ಅಲ್ಪ ದಿನಗಳಲ್ಲೆ ತಿಳಿ ಹಸಿರು ಬಣ್ಣದ ಕಾಯಾಗಿ ನಂತರ ಬಂಗಾರ ಬಣ್ಣ ಬಂದು ಬಾಯಿ ಚಪ್ಪರಿಸುವಂತಹ ಹುಳಿ ಕೊಡುವ ಹಣ್ಣೆಂದರೆ ಅದು ಮಾವು ಮಾತ್ರ. ಬರಿ ಮಾವಲ್ಲ ಕಾಡುಮಾವು. ಶತಮಾನಗಳಿಂದ ಹಿಡಿದು ಇಂದಿನವರೆಗೂ ಸಂಸ್ಕೃತವೂ ಸೇರಿದಂತೆ ಹಲವಾರು ಭಾಷೆಗಳ ಕೃತಿಗಳಲ್ಲಿ ಮಾವಿನ ವರ್ಣನೆ ಕಾಣಬಹುದು "ಮಾವಿನ ಕೊನೆ ಮಾವಿನ ನೆನೆ, ಮಾವಿನ ಪೂ ಮಾವಿನೆಳೆಯ ಮಿಡಿ ಮಾವಿನ ಕಾಯ್" ಎಂದು ಆದಿಕವಿ ಪಂಪನು ತನ್ನ ಕಾವ್ಯಲೋಕದಲ್ಲಿ ಬಣ್ಣಿಸಿದ್ದಾನೆ. ಶಾಂತಿನಾಥ ಪುರಾಣದಲ್ಲಿ ಮಾವಿನ ಚರಿತ್ರೆ ಕುರಿತು, "ಪುದಿದೆಳೆಗಾಯ್ ವಸಂತದ ಮೊದಲ್, ನೆರೆದೊಪ್ಪುವ ದೋರೆಗಾಯ್ ವಸಂತದ ನಡು ಪಣ್" ಎಂದು ಬಣ್ಣಿಸಿದ್ದಾನೆ. ಇನ್ನೂ ಹಲವು ಕವಿಗಳು ಮಾವಿನ ಕಾಯಿಗಳನ್ನು ಆಭರಣದಂತೆ, ಕೆಂದಳಿರನ್ನು ಕೆಂಜಡೆಯಾಗಿ ಬಣ್ಣಿಸಿದ್ದನ್ನು ಕಾಣಬಹುದು. ಮಾವು ಕವಿಗಳಿಗಲ್ಲದೆ ಕಲಾವಿದರಿಗೂ ಸ್ಪೂರ್ತಿ ನೀಡಿದೆ. ಕವಿಗಳು ಮಾಮರವನ್ನು ಮನಸಾರೆ ಹೊಗಳಿ, ವರ್ಣಿಸಿ ಕವನಗಳನ್ನು ರಚಿಸಿದ್ದಾರೆ. ಕೋಗಿಲೆಗಳು ಮಾವಿನ ಚಿಗುರನ್ನು ಸವಿದು ಮಧುರ ಕಂಠದಿಂದ ಹಾಡುತ್ತವೆ.



ಇನ್ನು ಕಾಡುಮಾವು ಊರುಮಾವು ಆಗಿದ್ದೇ ಒಂದು ರೋಚಕ. ಕಾಡುಗಳಲ್ಲಿ, ಹೊಳೆ/ರಸ್ತೆ ಬದಿಗಳಲ್ಲಿ, ಹೊಲದ ಸಂದುಗಳಲ್ಲಿ ಬೆಳೆಯುತ್ತಿದ್ದ ಕಾಡುಮಾವು ಗೊರಟು ಬಿದ್ದು ಸಸಿಯಾಗಿ ಮರವಾಗಿ ತನ್ನ ವಂಶಾಭಿವೃದ್ಧಿ ಹೊಂದುತ್ತಿದ್ದವು. ಈಗ ಮಾವಿನ ಮರಗಳೇ ಇಲ್ಲ. ಮಾವಿನ ಮರವಿಲ್ಲದೆ ಗೊರಟು ಬೀಳುವುದಿಲ್ಲ, ಗೊರಟು ಬೀಳದೆ ಅದು ಹುಟ್ಟುವುದಿಲ್ಲ. ಮಾನವ ತನ್ನ ಸ್ವಾರ್ಥಕ್ಕಾಗಿ ಮಾವನ್ನು ಕಡಿದ ಪರಿಣಾಮವಾಗಿ ಕಾಡುಮಾವಿನ ಮರಗಳೇ ಅಳಿವಿನಂಚಿನಲ್ಲಿವೆ.

**ಕಾಡುಮಾವಿನ ಪರಿಚಯ:** ಕಾಡುಮಾವು "ಅನಾಕಾರ್ಡಿಯೇಸಿ" ಕುಟುಂಬಕ್ಕೆ ಸೇರಿದ್ದು, "ಮ್ಯಾಂಗಫೇರ" ಎಂಬ ಸಸ್ಯಕುಲದಲ್ಲಿ (ಜೀನಸ್) ಪ್ರಪಂಚದ ವಿವಿದೆಡೆ ವ್ಯಾಪಕವಾಗಿ ಕಂಡುಬರುತ್ತದೆ. ಇದರ 30 ಕ್ಕಿಂತಲೂ ಹೆಚ್ಚು ತಳಿಗಳು ಪ್ರಚಲಿತದಲ್ಲಿವೆ. ಭಾರತದಲ್ಲಿ ಇದರ ತಳಿ ಸಸ್ಯ ನಾಮ "ಮ್ಯಾಗಿಫೆರ ಇಂಡಿಕ". ಸುಮಾರು 17 ಮತ್ತು 18 ನೇ ಶತಮಾನದಲ್ಲಿ ಯುರೋಪ್ ನ ಪ್ರವಾಸಿಗರು ಇದನ್ನು ಪಶ್ಚಿಮದ ಉಷ್ಣವಲಯದ ದೇಶಗಳಿಗೆ ಪ್ರಸರಿಸಿದರು. ಕಾಡುಮಾವು ತೇವಾಂಶವಿರುವ ಮಿಶ್ರವರ್ಣಪಾತಿ (ಮಿಕ್ಸ್ಡ್ ಡೆಸಿಡ್ಯುಯಸ್) ಹಾಗೂ ಅರೆ ನಿತ್ಯಹರಿದ್ವರ್ಣ ಕಾಡುಗಳಲ್ಲಿ ಎತ್ತರವಾಗಿ ಸುಮಾರು 40 ಅಡಿಗಳವರೆಗೂ ಬೆಳೆಯುತ್ತದೆ.

**ಉಪಯೋಗಿಸುವ ಭಾಗಗಳು:** ಮರದ ತೊಗಟೆ, ಎಲೆಗಳು, ಕಾಯಿ ಮತ್ತು ಹಣ್ಣು.

**ಔಷಧೀಯ ಉಪಯೋಗಗಳು:**

**ರಕ್ತ ಬೇಧಿ ಚಿಕಿತ್ಸೆಗೆ:** ಮಾವಿನ ಹಣ್ಣಿನ ಸಿಪ್ಪೆಯನ್ನು ಚೆನ್ನಾಗಿ ಅರೆದು ಹಾಲಿನಲ್ಲಿ ಕದಡಿ ಕುಡಿಯಬೇಕು.

ಮಹಿಳೆಯರಲ್ಲಿ ಕಂಡುಬರುವ ಅತಿ ರಕ್ತಸ್ರಾವ ನಿವಾರಣೆಗೆ: ಹೆಚ್ಚು ಹುಳಿಯಿರುವ ಮಾವಿನ ಸಿಪ್ಪೆಯನ್ನು ಚೆನ್ನಾಗಿ ಅರೆದು ತುಪ್ಪದಲ್ಲಿ ಹುರಿದು ಸ್ವಲ್ಪ ಸಕ್ಕರೆ ಬೆರೆಸಿ ಸೇವಿಸಿದರೆ ರಕ್ತಸ್ರಾವ ನಿವಾರಣೆಯಾಗುವುದು.

**ಹುಳಕಡ್ಡಿ ಚಿಕಿತ್ಸೆಗೆ:** ಮಾವಿನ ಕಾಯಿಯನ್ನು ಮುರಿದಾಗ ಸುರಿಯುವ ಸೊನೆಯನ್ನು ಹುಳಕಡ್ಡಿ ಇರುವ ಜಾಗಕ್ಕೆ ಲೇಪಿಸಿದರೆ ಹುಳಕಡ್ಡಿ ಕ್ರಮೇಣವಾಗಿ ನಿವಾರಣೆಯಾಗುವುದು. ಸಪ್ತಧಾತುಗಳ ವೃದ್ಧಿಗಾಗಿ: ಚೆನ್ನಾಗಿ ಬಲಿತ ಮತ್ತು ಮಾಗಿದ ಹಣ್ಣುಗಳ ಸೇವನೆಯಿಂದ ದೇಹದಲ್ಲಿರವ ಸಪ್ತಧಾತುಗಳ ವೃದ್ಧಿಯಾಗುತ್ತದೆ ಎಂದು ಪರಿಗಣಿಸಲಾಗಿದೆ. ವಿಟಮಿನ್-ಎ ಇರುವುದರಿಂದ ಕಣ್ಣಿನ ರಕ್ಷಣೆಗೂ ಒಳ್ಳೆಯದು.





ಕಾಡುಮಾವು ದೇಹದ ಕೊಲೆಸ್ಟ್ರಾಲ್ ನಿಯಂತ್ರಿಸುವುದರ ಜೊತೆಗೆ ದೇಹದ ಕ್ಷಾರೀಯ ಸಮತೋಲನ ಕಾಪಾಡುತ್ತದೆ. ಮೆದಳು ಮತ್ತು ಹೃದಯ ರೋಗ ತಡೆಯಲು ನೆರವಾಗುವ ಹಾರ್ಮೋನ್ ಗಳ ಉತ್ಪಾದನೆಗೆ ಕಾಡುಮಾವು ನೆರವಾಗುತ್ತದೆ. ಕಾಡುಮಾವು ಚಯಾಪಚಯ ಕ್ರಿಯೆ ಹೆಚ್ಚಿಸುತ್ತದೆ ಮತ್ತು ಇದರಲ್ಲಿನ ನಾರಿನಾಂಶವು ಕರಳಿನ ಚಲನೆಗೆ ನೆರವಾಗುತ್ತದೆ.

**ಆಹಾರವಾಗಿ ಕಾಡುಮಾವು :** ದೇಹದ ಆರೋಗ್ಯಕ್ಕಷ್ಟೆ ಅಲ್ಲದೆ ಬಗೆ ಬಗೆಯ ತಿಂಡಿಗಳು ಮತ್ತು ಪಾನೀಯಗಳನ್ನು ತಯಾರಿಸಲಾಗುತ್ತದೆ.

**ಇತರೆ ಉಪಯೋಗಗಳು:** ಇದರ ಕಟ್ಟಿಗೆಯು ಮೃದುವಾಗಿದ್ದು ಮರಗೆಲಸ ಮಾಡುವುದು ಸುಲಭ. ಇದನ್ನು ಪದರ ಹಲಗೆ(ಪ್ಲೈವುಡ್) ತಯಾರಿಕೆಯಲ್ಲಿ ಹಾಗೂ ಕೆಲವು ತಾತ್ಕಾಲಿಕ ಉಪಯೋಗದ ಕೆಲಸಗಳಿಗೆ ಹಲಗೆಗಳಾಗಿ ಬಳಸಬಹುದು. ಕಾಡುಮಾವಿನ ಮರದ ಕಾಂಡದಿಂದ ಬರುವ ಅಂಟನ್ನು ಬಣ್ಣಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಎಲೆಗಳನ್ನು ಹಬ್ಬ ಹಾಗೂ ಸಂತೋಷಕೂಟಗಳಲ್ಲಿ ಅಲಂಕಾರಿಕವಾಗಿ ಶೃಂಗಾರಕ್ಕಾಗಿ ಉಪಯೋಗಿಸುವರು.

ಕಾಡುಮಾವಿನ ರಕ್ಷಣೆ: ಒಟ್ಟಾರೆ ಅಳಿವಿನಂಚಿನಲ್ಲಿರುವ ಬಹುಪಯೋಗಿ ಕಾಡುಮಾವು ಮರಗಳನ್ನು ರಕ್ಷಿಸಿ, ಬೆಳೆಸಬೇಕಾದ ಕರ್ತವ್ಯ ಪ್ರತಿಯೊಬ್ಬರದು, ಬನ್ನಿ ಎಲ್ಲರೂ ಕೈಜೋಡಿಸೋಣ, ನಮ್ಮ ಆರೋಗ್ಯಕ್ಕೆ ಅನುಕೂಲವಾಗುವ, ನಮ್ಮ ಸಂಸ್ಕೃತಿಯೊಂದಿಗೆ ಪರಂಪರಾಗತವಾಗಿ ಬಂದಿರುವ ಕಾಡುಮಾವನ್ನು ಬೆಳೆಸೋಣ.



- ಆರ್. ಎಸ್. ರವೀಂದ್ರ

ಸಹಾಯಕ ಪ್ರಾಧ್ಯಾಪಕರು

ರಸಾಯನ ಶಾಸ್ತ್ರ ವಿಭಾಗ

ಸಾಯಿ ವಿದ್ಯಾ ತಾಂತ್ರಿಕ ಮಹಾವಿದ್ಯಾಲಯ

ಬೆಂಗಳೂರು-560064

# ಶಿಖರ

ಮಹಾಕಾಂತ ರೂಪ
ಅನಂತವರ್ಣ ತೇಜ
ಮೇಘಧೂತ ಮಹಾಶಾಂತ

ಚಿತ್ತಾಕರ್ಷ ರೂಪ
ರವಿವರ್ಣ ಭೂಷಣ
ಸಧೃಡ ಮಹಾಕಾಯ

ವಿಶಾಲರಮ್ಯ ರೂಪ ಸುಂದರ
ಶೈಲಸೌಮ್ಯ ಸುಂದರ
ದಿವ್ಯರೂಪ ಸಾಗರ

ಪೂರ್ಣಚಂದ್ರ ತೇಜ
ತಾರಗಣ ಭೂಷಿತ
ಮನೋವಿಹಾರಿಯ ಪ್ರೇರಕ

ಸರ್ವಋತು ಧಾರಣ
ಮಹಾ ಚೈತನ್ಯದ ಆಗರ
ಉತ್ತುಂಗದೆತ್ತರದ ಶಿಖರ

- ಕೃಷ್ಣನಾಯಕ್




ಇದು ಜಗದ ಜಲಕ್ಕೆ ಮೂಲ ಈ ಶಿಖರ



ಈ ಧರೆಗೆ ಹರುಷತರುವ ಗಳಿಗೆ ಇದು.